ಮೈಸೂರ ಗೆಜಿಟ.

ನಂ. 42 ಸರ್ಕಾರದಿಂದ ಪ್ರಾಯಿಷ್ ಆದ್ದು. ಸನ್ 1884.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ|| 18, ಸನ್ 1884.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜ್‌ರಯವರು, ಸರ್ವೆ ವ ಇನಾಂ ಸೂಪರ್ಟೆಂಡೆಂಟರು, ಕಾಂಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮೈಸೂರು ಸ್ಟೇಟ್‌ರೇಯಿಲ್‌ವೆ, ರಿಜಿಸ್ಟ್ರೇಷ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್‌ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷ್ ಜಡ್ಜ್‌ರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್‌ಸೂಪರ್ಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್‌ಆಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷಣ್‌ಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಕಳೆದ ದಸರಾ ಸಭೆಯಲ್ಲಿ ದಿವಾನರವರಿಂದ ಮಾಡಲ್ಪಟ್ಟ ಉಪನ್ಯಾಸ.

1ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 13ನೇ ಅಕ್ಟೋಬರ್ 1884.

ನಂ. 146.—ಬೆಂಗಳೂರು ಡಿಸ್ಟ್ರಿಕ್ಟು ಫಾರೆಸ್ಟ್ ಅಸಿಸ್ಟೆಂಟ್ ಕಂಸರ್‌ವೇಟರ್ ಮೆ|| ಸಿ. ನಾರಾಯಣರಾಯರು, ಮೈಸೂರು ಡಿಸ್ಟ್ರಿಕ್ಟಿಗೆ ವರ್ಗಮಾಡಲ್ಪಟ್ಟಿರುತ್ತಾರೆ. ಅವರು, ಮೆ|| ಸಿ. ಇ. ಯಂ. ರಸ್ಸೆಲ್ ಯವರು ರಜಾದಮೇಲಿರುವಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಸೂಪರ್ಟೆಂಡೆಂಟ್ ಕೆಲಸವನ್ನ ನೋಡತಕ್ಕದ್ದು,—ಕೂಡ್ಲೆ ಕೆಲಸದಮೇಲೆ ಹೋಗತಕ್ಕದ್ದು.

ಪ್ಲಾಂಟೇಷ್ ಫಾರ್ಜಿನಲ್ಲಿರುವ ಬೂಪೂರಾಯರು, ಫಾರೆಸ್ಟ್ ಡಿಪಾರ್ಟುಮೆಂಟಿಗೆ ಅಪ್ರೆಂಟಿಸರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ. ಅವರು ತಮ್ಮ ಪ್ಲಾಂಟೇಷ್ ಸಂಬಂಧ ಕೆಲಸಗಳೊಂದಿಗೆ ಬೆಂಗಳೂರು ಡಿಸ್ಟ್ರಿಕ್ಟು ಫಾರೆಸ್ಟುಗಳ ಚಾರ್ಜನ್ನೂ ವಹಿಸತಕ್ಕದ್ದು; ಮತ್ತು ಮೆ|| ಸಿ. ನಾರಾಯಣರಾಯರು ಇತರ ಕೆಲಸದ ಮೇಲೆ ಇರುವಲ್ಲಿ, ಡೆಪ್ಯುಟಿ ಕಮ್ಮಿಷನರ್ ಹುಕುಮಿಗೆ ವಳಪಟ್ಟು ರೈಲ್‌ವೆ ಇಲಾಖೆಗೆ ಸಾದೆ ಸರಬರಾಯಿ ಮಾಡುವ ಕೆಲಸವನ್ನು ನಿರ್ವಹಿಸತಕ್ಕದ್ದು.

ನಂ. 147.—ತುಮಕೂರು ಡಿಸ್ಟ್ರಿಕ್ಟ್ ಚಿಕ್ಕನಾಯಿಕನಹಳ್ಳಿ ತಾಲ್ಲೂಕು ಅಮಲ್ದಾರ್ ರಾಮಸ್ವಾಮಯ್ಯನವರು, 1884ನೆ ಇಸವಿ ಸೆಪ್ಟಂಬರ್ 17ನೇ ಮಂಗಳವಾರದ ಮಧ್ಯಾನ್ಹದಲ್ಲಿ ಮರಳಿ ಕೆಲಸದ ಮೇಲೆ ಹಾಜರಾದದರಿಂದ, ಅವರಿಗೆ 1884ನೇ ಇಸವಿ ಆಗಸ್ಟ್ 8ನೇ ಮಂಗಳವಾರದ 105ನೇ ನಂಬರ್‌ವುಳ್ಳ ಈ ಆಫೀಸ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟಿದ್ದ ಪ್ರಿವಿಲೀಜ್ ರಜಾ ಬೈಕೀ ಉಳಿದ ಭಾಗವು ರದ್ದುಮಾಡಲ್ಪಟ್ಟಿರುತ್ತೆ.

ಮೊಕ್ಕಾಂ ಮೈಸೂರು, ತಾರೀಖು 16ನೇ ಅಕ್ಟೋಬರ್ 1884.

ನಂ. 148.—ಇದರಿಂದ ಸರ್ವಸಾಧಾರಣ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ದೇಶದ ಉತ್ಪತ್ತಿ ಬಾಬತು ಗಂಧದ ಮರದ ಸಾಲೀಯನಾ ಹರಾಜುಗಳು ಇದರಡೀಕಂಡ ತಾರೀಖು ವ ಸ್ಥಳಗಳಲ್ಲಿ ಆಯಾ ಡಿಸ್ಟ್ರಿಕ್ಟ್‌ನ ಡೆ|| ಕಮ್ಮಿಷನರ್ ವ ಫಾರೆಸ್ಟ್ ಆಫೀಸರ್ ಗಳಿಂದ ನಡಿಸಲ್ಪಡುತ್ತೆ:—

		ಸಲ್ಪ ಹೆಚ್ಚುಕಡಿಮೆಯಾಗಿರ್ಬಹುದಾದ ಗಂಧದ ಮರಗಳು.
ಶ್ರೀರಂಗಪಟ್ಣ	ತಾರೀಖು 1ನೇ ಡಿಸಂಬರ್ 1884	500
ಹುಣಸೂರು	ತಾರೀಖು 4ನೇ ಡಿಟೋ ,,	
ಬೆಂಗಳೂರು	ತಾರೀಖು 8ನೇ ಡಿಟೋ ,,	280
ಸೊರಬ	ತಾರೀಖು 13ನೇ ಡಿಟೋ ,,	200
ಅನಂತಪುರ	ತಾರೀಖು 18ನೇ ಡಿಟೋ ,,	200
ಶಿವಮೊಗ್ಗ	ತಾರೀಖು 22ನೇ ಡಿಟೋ ,,	500
ತೀರ್ಥಹಳ್ಳಿ	ತಾರೀಖು 7ನೇ ಜನವರೀ 1885	200
ಚಿಕ್ಕಮಗಳೂರು	ತಾ|| 14ನೇ ಡಿಟೋ ,,	200
ಹಾಸನ	ತಾರೀಖು 21ನೇ ಡಿಟೋ ,,	400

ಹರಾಜಿನ ಷರತ್ತುಗಳು.—ಸ್ ಈ 1874ನೇ ಇಸವಿ ಡಿಸಂಬರ್ 5ನೇ ಮಂಗಳವಾರ 48ನೇ ನಂಬರ್ ಮೈಸೂರು ಗೆಜೆಟ್ಟಿನಲ್ಲಿ ಘಾಯಿಷ್ಟಾಗಿ ಪ್ರಕಟಿಸಲ್ಪಟ್ಟ ಪ್ರಕಾರ ಇರತಕ್ಕವು, ಮತ್ತು ಹರಾಜ್ ಕಾಲದಲ್ಲಿ ಘೋಷಿಸಲ್ಪಡುವವು. ತೀರ್ಥಹಳ್ಳಿ, ಚಿಕ್ಕಮಗಳೂರು ಮತ್ತು ಹಾಸನ ಈ ಸ್ಥಳಗಳಲ್ಲಿ ಕೊಂಡುಕೊಳ್ಳುವ ಗಂಧದ ಮರಗಳ ಕಿಮ್ಮತ್ ಪಾವತೀ ಬಗ್ಗೆ ವ್ಯವಸ್ಥೆಯು, 1885ನೇ ಇಸವೀ ಮಾರ್ಚಿ 25ನೇ ತಾರೀಖಿಗೆ ಅಜ್ಮೈರಾಗುವದು.

ತಾರೀಖು 21ನೇ ಮಾರ್ಚೀ 1883

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಗೆ ಹಿಂದಿನ ದಿನ ಸೆಕ್ರಿಟೇರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

ಬವೋಜೀಬ್ ಹುಕ್ಕುಂ,
ಆರ್. ವಿಜಯೀಂದ್ರರಾವ್,
ಸೆಕ್ರಿಟೇರಿ.